**ಪಾಠ–4** **ಜನವರಿ 5–11**

# ದೀಪಸ್ಥಂಭಗಳ ನಡುವೆ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಪ್ರಕಟನೆ, ಯೆಹೆಜ್ಕೇಲನು 1:5–14, ಪ್ರಕಟನೆ 5, ಎಫೆಸದವರಿಗೆ 1:20–23, ಇಬ್ರಿಯರಿಗೆ 10:12, ಅಪೋಸ್ತಲರ ಕೃತ್ಯಗಳು 2:32–36.

ಸ್ಮರಣವಾಕ್ಯ : ಅಳಬೇಡ; ಅಗೋ, ಯೂದಾ ಕುಲದಲ್ಲಿ ಜನಿಸಿದ ಸಿಂಹವೂ ದಾವೀದನ ಅಂಕುರದವನೂ ಆಗಿರುವಾತನು ಜಯಹೊಂದಿದನು; ಆತನು ಆ ಸುರಳಿಯನ್ನೂ ಅದರ ಏಳು ಮುದ್ರೆಗಳನ್ನೂ ಬಿಚ್ಚುವನು ಎಂದು ಹೇಳಿದನು. ಪ್ರಕಟನೆ 5:5.

ಕಳೆದ ವಾರ, ನಾವು ಭೂಮಿಯ ಮೇಲಿನ ತನ್ನ ಜನರಿಗೆ ಕ್ರಿಸ್ತನ ಸಂದೇಶಗಳನ್ನು ನೋಡಿದ್ದೇವೆ. ಈಗ ಯೋಹಾನನ ದರ್ಶನವು ಭೂಮಿಯಿಂದ ಪರಲೋಕದ ಕಡೆಗೆ ಬದಲಾಗುತ್ತದೆ ಮತ್ತು "ಇದಾದ ನಂತರ ನಡೆಯಲೇ ಬೇಕಾದ ವಿಷಯಗಳ" ಮೇಲೆ ಗಮನವಿಡುತ್ತದೆ (ಪ್ರಕಟನೆ 4:1) – ಭವಿಷ್ಯದಲ್ಲಿ.

ಅಧ್ಯಾಯ 4 ಮತ್ತು 5 ರ ದರ್ಶನವು ಪರಲೋಕ ಸಿಂಹಾಸನ ಕೋಣೆಯೊಳಗೆ ನಡೆಯುತ್ತದೆ. 4 ಮತ್ತು 5ನೇ ಅಧ್ಯಾಯಗಳ ದೃಶ್ಯವು ಇತಿಹಾಸದ ಮೇಲೆ ದೇವರ ಹತೋಟಿ ಮತ್ತು ರಕ್ಷಣಾ ಯೋಜನೆಗಳನ್ನು ಸಾಂಕೇತಿಕವಾಗಿ ಚಿತ್ರಿಸುತ್ತದೆ.

ಭವಿಷ್ಯವನ್ನು ಬಹಿರಂಗಪಡಿಸುವ ಮೊದಲು, ಆದಾಗ್ಯೂ, ನಾವು ಪರಲೋಕದಲ್ಲಿ ಕ್ರಿಸ್ತನ ಮಹಾಯಾಜಕ ಸೇವೆಯ ಕೇಂದ್ರತ್ವವನ್ನು ಭೂಮಿಯ ವ್ಯವಹಾರಗಳ ಮೇಲಿನ ಅವರ ಸಾರ್ವಭೌಮತ್ವಕ್ಕೆ ಮತ್ತು ಆತನ ಮಾನವ ಜನಾಂಗದ ವಿಮೋಚನೆಯನ್ನು ತೋರಿಸಲಾಗಿದೆ. ಅಂತಹ ರೀತಿಯಲ್ಲಿ, ಅಧ್ಯಾಯ 4 ಮತ್ತು 5 ಪರಲೋಕದ ದೃಷ್ಟಿಕೋನವನ್ನು ಪುಸ್ತಕದ ಉಳಿದ ಭಾಗಗಳಲ್ಲಿ ದಾಖಲಿಸಲಾದ ಭವಿಷ್ಯದ ಘಟನೆಗಳ ಅರ್ಥವನ್ನು ಒದಗಿಸುತ್ತವೆ.

ಏಳು ಸಭೆಗಳಿಗೆ ಸಂದೇಶಗಳು ಸ್ವಲ್ಪವು ಮುಚ್ಚು ಮರೆಯಿಲ್ಲದ ಭಾಷೆಯಲ್ಲಿದ್ದರೂ, ಈಗ ಪುಸ್ತಕ ಇನ್ನಷ್ಟೂ ಸಾಂಕೇತಿಕ ಭಾಷೆಯನ್ನು ಬಳಸಿಕೊಳ್ಳುತ್ತದೆ ಮತ್ತು ಅದನ್ನು ಯಾವಾಗಲೂ ಅರ್ಥೈಸುವುದು ಸುಲಭವಲ್ಲ ಎಂದು ಒಬ್ಬರು ಗಮನಿಸಬಹುದು. ಹಳೇ ಒಡಂಬಡಿಕೆಯಲ್ಲಿ ನಮೂದಿಸಿದಂತೆ, ಈ ಭಾಷೆಯನ್ನು ದೇವಜನರ ಇತಿಹಾಸದಿಂದ ತೆಗೆದುಕೊಳ್ಳಲಾಗಿಎ ಪ್ರಕಟನೆಯ ಸರಿಯಾದ ಅರ್ಥ ವಿವರಣೆಯನ್ನು ಹಳೇ ಒಡಂಬಡಿಕೆಯ ಬೆಳಕಿನಲ್ಲಿ ಅದರ ಸಾಂಕೇತಿಕ ಭಾಷೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಅಗತ್ಯವಿದೆ.

**ಜನವರಿ 26, ಸಬ್ಬತ್ತಿಗಾಗಿ ತಯಾರಾಗಲು ಈ ವಾರದ ಪಾಠವನ್ನು ಅಧ್ಯಯನ ಮಾಡಿ.**

**ಭಾನುವಾರ** **ಜನವರಿ 20**

## ಪರಲೋಕ ಸಿಂಹಾಸನ ಕೋಣೆಯೊಳಗೆ

ಪ್ರಕಟನೆ 4:1 ರಲ್ಲಿ ಪ್ರಾರಂಭಿಸುವ, ಯೇಸುಕ್ರಿಸ್ತನ ಕಾಲದಿಂದ ಆತನು ತಿರುಗಿ ಬರುವ ಸಮಯದವರೆಗೂ ಯೋಹಾನನಿಗೆ ಇತಿಹಾಸದ ಸರ್ವತೋಮುಖ ದೃಶ್ಯ ಸಮೀಕ್ಷೆಯನ್ನು ತೋರಿಸಲು ಯೋಹಾನನಿಗೆ ಪರಲೋಕಕ್ಕೆ ಬರಲು ಆಹ್ವಾನಿಸಿದರು.

ಪ್ರಕಟನೆ 4:1–8, ಯೆಹೆಜ್ಕೇಲನು 1:26–28 ಮತ್ತು ಪ್ರಕಟನೆ 5:11–14 ಪರಲೋಕದ ಸಿಂಹಾಸನದ ಕೋಣೆಯನ್ನು ವಿವರಿಸುತ್ತದೆ. ಪರಲೋಕ ಸಿಂಹಾಸನದ ಕೋಣೆಯ ಸ್ವಭಾವದ ಬಗ್ಗೆ ಈ ವಾಕ್ಯಗಳು ನಮಗೇನು ಕಲಿಸುತ್ತದೆ?

ಅಪೋಸ್ತಲನು ತೆರೆದ ಬಾಗಿಲ ಮೂಲಕ ಪರಲೋಕ ದೇವಾಲಯ ಮತ್ತು ದೇವರ ಸಿಂಹಾಸನವನ್ನು ನೋಡಿದನು. ಸಿಂಹಾಸನವು ದೇವರ ಆಳ್ವಿಕೆಯನ್ನು ಮತ್ತು ಸೃಷ್ಟಿಯ ಮೇಲೆ ಆತನ ಅಧಿಕಾರವನ್ನು ನಿಯಂತ್ರಿಸುವುದರ ಸಂಕೇತವಾಗಿದೆ, ಸಿಂಹಾಸನದ ಸುತ್ತಲೂ ಇರುವ ಕಾಮನಬಿಲ್ಲು ದೇವರ ವಾಗ್ದಾನಗಳಿಗೆ ಆತನ ನಂಬಿಗಸ್ತಿಕೆಯನ್ನು ಸೂಚಿಸುತ್ತದೆ (ಆದಿಕಾಂಡ 9:13–16; ಯೆಶಾಯ 54:9,10). ಆದಾಗ್ಯೂ ಸೈತಾನನು ಈ ಭೂಮಿಯ ಆದಿಪತ್ಯವನ್ನು ಪಡೆದುಕೊಂಡನು ಮತ್ತು ದೈವೀಕ ಅಧಿಕಾರವನ್ನು ವಿರೋಧಿಸಿ, ದೇವರಿಗೆ ವಿರೋಧಿಯಾಗಿದ್ದಾನೆ. ಯಾರಿಗೆ ಆಳುವ ಹಕ್ಕಿದೆ ಎನ್ನುವುದು ದೇವರ ಮತ್ತು ಸೈತಾನನ ನಡುವಿನ ಮಹಾಹೋರಾಟ ಕೇಂದ್ರ ವಿವಾದವಾಗಿದೆ. ಪರಲೋಕ ಸಿಂಹಾಸನದ ಕೋಣೆಯಲ್ಲಿ ಯೋಹಾನನು ಸಂಗ್ರಹಿಸಿದ ಪರಲೋಕ ಆಸ್ಥಾನದ ಉದ್ದೇಶವು ವಿಶ್ವದಾದ್ಯಂತ ದೇವರ ನ್ಯಾಯಸಮ್ಮತ ಆಳ್ವಿಕೆಯನ್ನು ದೃಢೀಕರಿಸುತ್ತದೆ (ಪ್ರಕಟನೆ 4:1–8; ಪ್ರಕಟನೆ 5:11–14).

ಪ್ರಕಟನೆ 4:8–11 ಮತ್ತು ಪ್ರಕಟನೆ 5:9–14 ಓದಿ. ಈ ವಾಕ್ಯವೃಂದಗಳಲ್ಲಿ ಸತ್ಯ ಆರಾಧನೆಯ ಬಗ್ಗೆ ನೀವು ಏನು ಕಲಿಯಬಹುದು? 4ನೇ ಅಧ್ಯಾಯದಲ್ಲಿ, ದೇವರನ್ನು ಆರಾಧಿಸಬೇಕೆಂಬುದು ಏಕೆ ಯೋಗ್ಯವಾಗಿದೆ ಮತ್ತು ಪ್ರಕಟನೆ 5:9–14 ರಲ್ಲಿ ಕುರಿಮರಿ ಯಾಕೆ ಯೋಗ್ಯವಾಗಿದೆ?

ಪ್ರಕಟನೆ 4 ರಲ್ಲಿರುವ ಪರಲೋಕ ದೇವಾಲಯದ ಸಿಂಹಾಸನದ ಕೊಠಡಿಯಲ್ಲಿ ಪದೇ ಪದೇ ನಡೆಯುವ ಸಾಮಾನ್ಯ ವಿವರಣೆಯನ್ನು ನೀಡಲಾಗಿದೆ. 4ನೇ ಅಧ್ಯಾಯದಲ್ಲಿರುವ ಆರಾಧನೆ ದೇವರ ಸೃಷ್ಟಿಯ ಶಕ್ತಿಯನ್ನು ಹೊಗಳುತ್ತಾದರೂ ಅಧ್ಯಾಯ 5 ರಲ್ಲಿ ಕೊಯ್ಯಲ್ಪಟ್ಟ ಕುರಿಮರಿಯು ಒದಗಿಸಿದ ವಿಮೋಚನೆಯನ್ನು ಆಚರಿಸುತ್ತದೆ. ಈ ಅಧ್ಯಾಯಗಳ ನಿಜವಾದ ನೆನಪನ್ನು ತೋರಿಸುತ್ತದೆ ಮತ್ತು ದೇವರ ಪ್ರಬಲವಾದ ಸೃಷ್ಟಿ ಮತ್ತು ವಿಮೋಚನೆಗಳನ್ನು ಆಚರಿಸುತ್ತದೆ. ಆರು ದಿನಗಳಲ್ಲಿ ಜಗತ್ತನ್ನು ಸೃಷ್ಟಿಸಿದ ದೇವರು, ತನ್ನ ಮೂಲಸ್ಥಿತಿಯನ್ನು ಪುನಃ ಸ್ಥಾಪಿಸಲು ಮತ್ತು ತನ್ನ ಜನರಿಗೆ ನಿತ್ಯವಾದ ಮನೆಯಾಗಿ ಪರಿವರ್ತಿಸುವ ಶಕ್ತಿ ಮತ್ತು ಸಾಮರ್ಥ್ಯವನ್ನು ಹೊಂದಿದ್ದಾನೆ. ಅವೆಲ್ಲವನ್ನು ಮಾಡುತ್ತೇನೆ ಎಂದು ಆತನು ವಾಗ್ದಾನ ಮಾಡಿದ್ದಾನೆ.

ಸುವಾರ್ತೆ ಏನು ಬೋಧಿಸುತ್ತದೆ ಎಂಬುದರ ಬಗ್ಗೆ ಆಲೋಚಿಸಿ : ಕೊಯ್ಯಲ್ಪಟ್ಟ ಕುರಿಮರಿ (ಪ್ರಕಟನೆ 5:12) ಕೇವಲ ನಮಗೋಸ್ಕರ ಮತ್ತು ನಮ್ಮ ಲೋಕಕ್ಕಾಗಿ ಮಾತ್ರ ಸೃಷ್ಟಿಸಿದವನಲ್ಲ. ಆದರೆ ಇಡೀ ವಿಶ್ವಕ್ಕಾಗಿ, ನಮಗಾಗಿಯೂ ಸಹ ನೋವು ಮತ್ತು ಗದ್ದಲ ತುಂಬಿರುವ ಜಗತ್ತಿನಲ್ಲಿ ಈ ಬೋಧನೆಯು ಯಾವ ಅದ್ಭುತ ನಿರೀಕ್ಷೆಯನ್ನು ನೀಡುತ್ತದೆ?

**ಸೋಮವಾರ** **ಜನವರಿ 21**

## ಸಿಂಹಾಸನ ಕೋಣೆಯಲ್ಲಿ ಪರಲೋಕ ಸಭೆ

ಪ್ರಕಟನೆ 4:4 ರಲ್ಲಿರುವ ಹಿರಿಯರ ವಿವರಣೆಯು ಅವು ದೇವದೂತ ಜೀವಿಗಳಲ್ಲಿ ಎಂದು ತೋರಿಸುತ್ತದೆ. ಸತ್ಯವೇದದಲ್ಲಿ 'ಹಿರಿಯರು' ಎಂಬ ಪದವನ್ನು ಮನುಷ್ಯರಿಗೆ ಯಾವಾಗಲೂ ಬಳಸಲಾಗಿದೆ. ದೇವದೂತರುಗಳು ಪರಸ್ಪರ ವ್ಯತ್ಯಾಸ ತೋರಿಸುವಲ್ಲಿ, ಅವರು ದೇವರ ಸನ್ನಿಧಿಯಲ್ಲಿ ಸ್ಥಿರವಾಗಿ ನಿಲ್ಲುತ್ತಾರೆ. ಈ ಹಿರಿಯರು ಸಿಂಹಾಸನದ ಮೇಲೆ ಕೂತಿದ್ದಾರೆ. ಅವರು ಧರಿಸುವ ಬಿಳಿ ನಿಲುವಂಗಿಗಳು ದೇವ ನಂಬಿಗಸ್ತ ಜನರ ಉಡುಪುಗಳಾಗಿವೆ (ಪ್ರಕಟನೆ 3:4, 5). ಜಯಶಾಲಿ ಕಿರೀಟಗಳು (ಗ್ರೀಕ್ ಸೈಪ್‌ನೋಸ್‌ನಿಂದ ಪ್ರಕಟನೆ 4:4). ಅವರ ತಲೆಯ ಮೆಲೆ ಜಯಶಾಲಿಯಾದ ಸಂತರಿಗೆ (ಯಾಕೋಬ 1:12) ಪ್ರತ್ಯೇಕವಾಗಿ ಕಾಯ್ದಿರಿಸಲಾಗಿದೆ. ಈ ಎಲ್ಲಾ ವಿವರಗಳನ್ನು 24 ಹಿರಿಯರನ್ನು ಮಹಿಮೆಯೊಂದಿದ ಸಂತರು ಎಂದು ಸೂಚಿಸುತ್ತಾರೆ.

ಸಂಖ್ಯೆ 24 ಸಾಂಕೇತಿಕವಾಗಿದೆ : ಇದು 12 ರ ಎರಡು ಗುಂಪುಗಳನ್ನು ಒಳಗೊಂಡಿದೆ, ಸತ್ಯವೇದದಲ್ಲಿ ಸಂಖ್ಯೆ 12 ದೇವರ ಜನರ ಸಂಕೇತವಾಗಿದೆ. ಹಳೆಯ ಮತ್ತು ಹೊಸ ಒಡಂಬಡಿಕೆಗಳ ಕಾಲದಿಂದಲೂ, 24 ಹಿರಿಯರು ದೇವರ ಜನರನ್ನು ಅವರ ಸಂಪೂರ್ಣತೆಯಲ್ಲಿ ಪ್ರತಿನಿಧಿಸಬಹುದು. ಸಂಖ್ಯೆ 24, ಯಾಜಕರ 24 ವಿಭಾಗಗಳ ಮುಖ್ಯಸ್ಥರನ್ನು ಪ್ರತಿಬಿಂಬಿಸುತ್ತದೆ ಮತ್ತು ಅವರು ಭೂಲೋಕದ ದೇವದರ್ಶನ ಗುಡಾರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ (1 ಪೂರ್ವಕಾಲ ವೃತ್ತಾಂತ 24:1–19).

ಸತ್ಯವೇದದಲ್ಲಿ ಮೊದಲು 24 ಹಿರಿಯರು ಎಂದಿಗೂ ಉಲ್ಲೇಖಿಸಲ್ಪಟ್ಟಿಲ್ಲ ಎಂಬ ಅಂಶವು ಅವರು ಪರಲೋಕ ಸಿಂಹಾಸನ ಕೊಠಡಿಯಲ್ಲಿ ಹೊಸ ಗುಂಪು ಎಂದು ಸೂಚಿಸುತ್ತದೆ. ಯೇಸುವಿನ ಮರಣದ ಸಮಯದಲ್ಲಿ ಅವರು ಸತ್ತವರೊಳಗಿಂದ ಎದ್ದು ಬರುವವರಾಗಿದ್ದಾರೆ (ಮತ್ತಾಯ 27:51–53).

ಹಾಗಿದ್ದಲ್ಲಿ ಯೇಸುವಿನೊಂದಿಗೆ ಪರಲೋಕಕ್ಕೆ ಏರಿದ ಈ 24 ಹಿರಿಯರು ಮಾನವಕುಲವನ್ನು ಪ್ರತಿನಿಧಿಸುತ್ತಾರೆ, ರಕ್ಷಣಾ ಯೋಜನೆಯನ್ನು ಸ್ಪಷ್ಟವಾಗಿ ಗ್ರಹಿಸುವಲ್ಲಿ ದೇವರ ಕೃತ್ಯಗಳಲ್ಲಿ ನ್ಯಾಯವಾದ ಸಾಕ್ಷಿಯಾಗುತ್ತವೆ. ಪ್ರಕಟನೆ 5:9 ರಲ್ಲಿ 24 ಹಿರಿಯರು, ನಾಲ್ಕು ಜೀವಿಗಳ ಜೊತೆಯಲ್ಲಿ (ವಾಕ್ಯ 8), ಕೊಯ್ಯಲ್ಪಟ್ಟ ಕುರಿಮರಿಯ ಮುಂದೆ ಆರಾಧನೆಗೆ ಇಳಿಯುತ್ತಾರೆ ಮತ್ತು ಇನ್ನೂ ಜೀವಿಸುತ್ತಾರೆ. ಒಟ್ಟಿಗೆ, ಅವರು ಹೊಸ ಹಾಡನ್ನು ಹಾಡುತ್ತಾ; ಕುರಿಮರಿಗೆ ಯೋಗ್ಯವಾದುದು ಎಂದು ಶ್ಲಾಘಿಸುತ್ತಾರೆ. ಏಕೆಂದರೆ : "ನೀವು ಕೊಯ್ಯಲ್ಪಟ್ಟವರು ಮತ್ತು ಪ್ರತಿ ಬುಡಕಟ್ಟು ಮತ್ತು ಭಾಷೆ ಮತ್ತು ಜನರು ಮತ್ತು ಜನಾಂಗದಿಂದ, ನಮ್ಮನ್ನು ನಿಮ್ಮ ರಕ್ತದಿಂದ ದೇವರಿಗಾಗಿ ವಿಮೋಚನೆಗೊಳಿಸಿದ್ದೀರಿ ಮತ್ತು ದೇವರಿಗೆ ನಮ್ಮನ್ನು ರಾಜರು ಮತ್ತು ಯಾಜಕರನ್ನಾಗಿ ನೇಮಿಸಿದೆ ಮತ್ತು ನಾವು ಭೂಮಿಯ ಮೇಲೆ ಆಳುವೆವು" (ಪ್ರಕಟನೆ 5:8–10).

ಪ್ರಕಟನೆ 4:6–8 ರಲ್ಲಿ ಕೂಡಾ ನಾಲ್ಕು ಜೀವಿಗಳು ಅಥವಾ ಜೀವಿಸುವವರನ್ನು ಉಲ್ಲೇಖಿಸಲಾಗಿದೆ. ಯೆಹೆಜ್ಕೇಲನು 1:5–14 ಮತ್ತು ಯೆಹೆಜ್ಕೇಲನು 10:20–22 ಮತ್ತು ಯೆಶಾಯ 6:2,3 ರಲ್ಲಿ ಸೊಫಿಯರೊಂದಿಗೆ ನಾಲ್ಕು ಜೀವಿಗಳ ವಿವರಣೆಯನ್ನು ಹೋಲಿಕೆ ಮಾಡಿ.

ನಾಲ್ಕು ಜೀವಂತ ಜೀವಿಗಳು ದೇವರ ಕಾರ್ಯಭಾರಿಯಾಗಿ ಮತ್ತು ಸಿಂಹಾಸನದ ಕಾವಲುಗಾರರಾಗಿ ಸೇವೆ ಸಲ್ಲಿಸುವ ಉನ್ನತ ಜೀವಿಗಳನ್ನು ಸಂಕೇತಿಸುತ್ತದೆ. ಅವರ ರೆಕ್ಕೆಗಳು ದೇವರ ಆದೇಶಗಳನ್ನು ಕೈಕೊಳ್ಳುವಲ್ಲಿ ಅವರ ವೇಗವನ್ನು ಸಾಂಕೇತಿಕವಾಗಿ ಸೂಚಿಸುತ್ತವೆ ಮತ್ತು ಅವರ ಕಣ್ಣುಗಳು ತಮ್ಮ ಬುದ್ಧಿ ಶಕ್ತಿಯನ್ನು ಸೂಚಿಸುತ್ತವೆ. ಅವರ ಉಪಸ್ಥಿತಿ, ಸಿಂಹಾಸನವನ್ನು ಸುಮಾರು 24 ಹಿರಿಯರ ಮತ್ತು ಅಸಂಖ್ಯಾತ ದೇವದೂತರ ಜೊತೆಯಲ್ಲಿ (ಕೀರ್ತನೆಗಳು

5:11), ಸಿಂಹಾಸನ ಕೊಠಡಿಯಲ್ಲಿ ಪರಲೋಕ ಮತ್ತು ಭೂಲೋಕ ಎರಡನ್ನು ಪ್ರತಿನಿಧಿಸುತ್ತದೆ ಎಂದು ತೋರಿಸುತ್ತದೆ.

**ಮಂಗಳವಾರ** **ಜನವರಿ 22**

## ಮುದ್ರಿತವಾದ ಸುರುಳಿ

ಪ್ರಕಟನೆ 5:1–4 ಓದಿ. ಯೆಶಾಯ 29:11, 12 ರ ಬೆಳಕಿನಲ್ಲಿ, ಮುದ್ರಿತವಾದ ಸುರುಳಿಯ ಅರ್ಥವೇನು, ಮತ್ತು ಯೋಹಾನನು ಯಾಕೆ ಅತ್ತನು?

ಗ್ರೀಕ್ ಪದವು ಈ ಸುರುಳಿಯನ್ನು ತಂದೆಯ ಬಲಗೈ ಸಿಂಹಾಸನದ ಮೇಲಿರುವುದೆಂದು ತೋರಿಸುತ್ತದೆ. ಅದನ್ನು ತೆಗೆದುಕೊಳ್ಳಲು ಮತ್ತು "ಅದರ ಮೊಹರುಗಳನ್ನು ಸಡಿಲಗೊಳಿಸಲು" ಯೋಗ್ಯವಾದ ಒಬ್ಬನಿಗಾಗಿ ಕಾಯುತ್ತಿತ್ತು (ಪ್ರಕಟನೆ 5:2).

ಎಲೆನ್ ಜಿ ವೈಟ್‌ರವರ ಮಾತಲ್ಲಿ ಈ ಮುದ್ರಿತ ಸುರುಳಿ 'ದೇವರ ಮುನ್ನೆಚ್ಚರಿಕೆಗಳ ಇತಿಹಾಸ, ಸಭೆ ಮತ್ತು ಜನಾಂಗಗಳ ಇತಿಹಾಸದ ಪ್ರವಾದನೆಯನ್ನು ಒಳಗೊಂಡಿದೆ. ಇಲ್ಲಿ ದೈವೀಕ ನುಡಿಗಳು, ಅವನ ಅಧಿಕಾರ, ಆತನ ಆಜ್ಞೆಗಳು, ನಿತ್ಯವಾದ ಸಂಪೂರ್ಣ ಸಾಂಕೇತಿಕ ಅಭಿಪ್ರಾಯ ಮತ್ತು ಜನಾಂಗಗಳ ಎಲ್ಲಾ ಆಡಳಿತ ಅಧಿಕಾರಗಳ ಇತಿಹಾಸವನ್ನು ಒಳಗೊಂಡಿದೆ. ಈ ಸುರುಳಿಯಲ್ಲಿ ಪ್ರತಿ ಜನಾಂಗ, ಭಾಷೆ ಮತ್ತು ಭೂಮಿಯ ಇತಿಹಾಸದ ಆರಂಭದಿಂದಲೂ ಇರುವ ಜನರ ಪ್ರಭಾವವು ಸಾಂಕೇತಿಕ ಭಾಷೆಯಲ್ಲಿದೆ' – ಎಲೆನ್ ಜಿ ವೈಟ್, ಮ್ಯಾನ್ಯುಸ್ಕ್ರಿಪ್ಟ್ ರಿಲೀಸಸ್, ಸಂಪುಟ 9, ಪುಟ 7.

ಸಂಕ್ಷಿಪ್ತವಾಗಿ ಮುದ್ರಿತ ಸುರುಳಿ ಪಾಪ ಸಮಸ್ಯೆಯನ್ನು ಪರಿಹರಿಸಲು ಮತ್ತು ಬಿದ್ದುಹೋದ ಮಾನವರನ್ನು ರಕ್ಷಿಸುವ ಯೋಜನೆಗಳ ದೇವರ ರಹಸ್ಯಗಳನ್ನು ಒಳಗೊಂಡಿದೆ. ಆ ನಿಗೂಢತೆಯ ಸಂಪೂರ್ಣ ನೈಜತೆ ಕ್ರಿಸ್ತನ ಎರಡನೇ ಬರೋಣದಲ್ಲಿ ಸಂಭವಿಸುತ್ತದೆ (ಪ್ರಕಟನೆ 10:7 ನೋಡಿ).

ಪ್ರಕಟನೆ 5:5–7 ಓದಿ. ಮುದ್ರಿತವಾದ ಸುರುಳಿಯನ್ನು ತೆಗೆದುಕೊಳ್ಳಲು ಮತ್ತು ಬಿಚ್ಚಲು ಇಡೀ ವಿಶ್ವದಲ್ಲೇ ಯೋಗ್ಯವಾದವನು ಕ್ರಿಸ್ತನೊಬ್ಬನೇ ಯಾಕೆ?

ಸಿಂಹಾಸನದ ಕೋಣೆಯಲ್ಲಿನ ಸಂದಿಗ್ಧ ಸ್ಥಿತಿ ಸೈತಾನನ ದಂಗೆಗೆ ಸಂಬಂಧಿಸಿದೆ. ಈ ಗ್ರಹವು ದೇವರು ಸೃಷ್ಟಿಸಿದರೂ ಸಹ, ಸೈತಾನನ ಅಧಿಪತ್ಯದ ಆಳ್ವಿಕೆಗೆ ಒಳಪಟ್ಟಿದೆ. ಆದಾಮನ ದೆಶೆಯಿಂದ ಪಾಪ ಬಂಧನದಿಂದ ರಕ್ಷಣೆಗಾಗಿ, ಯೋಹಾನನ ಕಣ್ಣೀರು ದೇವರ ಜನರ ಹಂಬಲವನ್ನು ವ್ಯಕ್ತಪಡಿಸಿತು. ಮುದ್ರಿತವಾದ ಸುರುಳಿ ಪಾಪ ಸಮಸ್ಯೆಯನ್ನು ಬಗೆಹರಿಸಲು ದೇವರ ಯೋಜನೆಯನ್ನು ಒಳಗೊಂಡಿತ್ತು. ದೇವರ ಅಗಾಧವಾದ ಶಕ್ತಿಯ ಬಗ್ಗೆ ನಿಸ್ಸಂದೇಹವಾಗಿ ಆ ಯೋಜನೆಯನ್ನು ಅವರು ಕೈಗೂಡಿಸಬಹುದು. ಆದಾಗ್ಯೂ, ಬಿದ್ದುಹೋದ ಮಾನವ ಜನಾಂಗದ ವಿಮೋಚನೆಗೆ ವಿಶೇಷವಾದುದು ಅಗತ್ಯವಿತ್ತು, ಅದು ಯೇಸುವೇ ಯಾವನು "ಜಯಶಾಲಿ"ಯಾಗಿ ಮತ್ತು ಈ ಪುಸ್ತಕವನ್ನು ಬಿಚ್ಚಲು ಯೋಗ್ಯನಾಗಿರುವನು. ಈ ಭೂಮಿಯಲ್ಲಿ ಪ್ರಾಬಲ್ಯವನ್ನು ಪಡೆದುಕೊಳ್ಳಲು ಮತ್ತು ದೇವದರ್ಶನ ಗುಡಾರದಲ್ಲಿ ನಮ್ಮ ಮಧ್ಯವರ್ತಿಯಾಗಿದ್ದಾರೆ.

ನಮ್ಮ ಕ್ರೈಸ್ತ ಅನುಭವದಲ್ಲಿ ಯೇಸುವನ್ನು ಮೊದಲು ಮತ್ತು ಅಗ್ರಗಣ್ಯವಾಗಿರಿಸಲು ನಾವು ಹೇಗೆ ಕಲಿಯುತ್ತೇವೆ?

**ಬುಧವಾರ** **ಜನವರಿ 23**

## ಯೋಗ್ಯವಾದ ಕುರಿಮರಿ

ಪ್ರಕಟನೆ 5:8–14 ಜೊತೆಗೆ ಎಫೆಸದವರಿಗೆ 1:20–23 ಮತ್ತು ಇಬ್ರಿಯರಿಗೆ 10:12 ಓದಿ. ಸಹಜವಾಗಿ, ಪ್ರಪಂಚದ ನಡುವೆ ನಮಗೆ ಮಹಾ ಭರವಸೆ ಮತ್ತು ಸಮಾಧಾನ ಕೊಡಬೇಕು ಎಂದು ಅವರು ಏನು ಹೇಳುತ್ತಿದ್ದಾರೆ?

ಕ್ರಿಸ್ತನಂತಹ ಕುರಿಮರಿ ಸಿಂಹಾಸನವನ್ನು ತಲುಪುತ್ತಿದ್ದಂತೆ, ಅವರು ಸುರುಳಿಯನ್ನು ತೆಗೆದುಕೊಂಡರು. ಎಲ್ಲಾ ಅಧಿಕಾರ ಮತ್ತು ಸಾರ್ವಭೌಮತ್ವವು ಅವನಿಗೆ ಸೇರಿವೆ ಎಂದು ಈ ನಡೆ ತೋರಿಸುತ್ತದೆ (ಮತ್ತಾಯ 28:18, ಎಫೆಸ 1:20–22). ಆ ಸಮಯದಲ್ಲಿ ಇಡೀ ವಿಶ್ವವು ಕ್ರಿಸ್ತನು ಭೂಮಿಯ ಮೇಲೆ ನಡೆಸುವ ನ್ಯಾಯಯುತ ಆಳ್ವಿಕೆಯನ್ನು ಒಪ್ಪಿಕೊಂಡಿದೆ. ಆದಾಮನೊಂದಿಗೆ ಕಳೆದು ಹೋದದ್ದು ಕ್ರಿಸ್ತನೊಂದಿಗೆ ಹಿಂಪಡೆಯಲಾಗಿದೆ.

ಕ್ರಿಸ್ತನು ಸುರುಳಿಯನ್ನು ತೆಗೆದುಕೊಳ್ಳುವಾಗ, ಆತನ ಕೈಯಲ್ಲಿ ಇಡೀ ಮಾನವ ಕುಲದ ಗುರಿಯನ್ನು ಹಿಡಿದುಕೊಂಡಿದ್ದಾನೆ. ಪ್ರಕಟನೆ 5:9 ರಲ್ಲಿ ಮಾಡಿದಂತೆ ನಾಲ್ಕು ಜೀವಂತ ಜೀವಿಗಳು ಮತ್ತು 24 ಹಿರಿಯರು ಅವನ ಮುಂದೆ ಅಡ್ಡ ಬೀಳುತ್ತಾರೆ : "ನೀವು ಸುರುಳಿ ತೆಗೆದುಕೊಳ್ಳಲು ಮತ್ತು ಅದರ ಮುದ್ರೆಯನ್ನು ಬಿಚ್ಚಲು ಯೋಗ್ಯರು; "ನೀವು ಕೊಯ್ಯಲ್ಪಟ್ಟವರು". ಈ ಆರಾಧನೆ ಕ್ರಿಯೆಯ ಮೂಲಕ, ಸ್ತೋತ್ರ ಮಾಡುವ ದೇವದೂತರು ಮತ್ತು ವಿಮೋಚಿಸಲ್ಪಟ್ಟ ಮಾನವ ಕುಲದ ಪ್ರತಿನಿಧಿಗಳು ಮನುಷ್ಯಕುಲದ ಬದಲಾಗಿ ಕ್ರಿಸ್ತನು ಮಾಡಿದ ತ್ಯಾಗ ಯಜ್ಞವನ್ನು ದೃಢೀಕರಿಸುತ್ತಾರೆ. ಆತನ ರಕ್ತದೊಂದಿಗೆ, ಬೀಳಲ್ಪಟ್ಟ ಮಾನವರಿಗಾಗಿ ಆತನು ಕ್ರಯವನ್ನು ಕೊಟ್ಟಿದ್ದಾನೆ ಮತ್ತು ಅವರೆಲ್ಲರಿಗೂ ವಿಮೋಚನೆಯ ಭರವಸೆಯನ್ನು ನೀಡುತ್ತಾನೆ ಮತ್ತು ನಾವು ಊಹಿಸಲಾಗದ ಭವಿಷ್ಯದ ಭರವಸೆಯನ್ನು ನೀಡುತ್ತದೆ.

ನಾಲ್ಕು ಜೀವಿಗಳು ಮತ್ತು ಹಿರಿಯರು ಈಗ ಸಿಂಹಾಸನವನ್ನು ಸುತ್ತುವರಿದಿರುವ ಲೆಕ್ಕವಿಲ್ಲದಷ್ಟು ದೇವದೂತರ ಆತಿಥ್ಯದೊಂದಿಗೆ ಸೇರಿದ್ದಾರೆ ಮತ್ತು ಅವರು ಕೊಯ್ಯಲ್ಪಟ್ಟ ಕುರಿಮರಿಗೆ ಈಗ ಸ್ತೋತ್ರ ಮಾಡುತ್ತಿದ್ದಾರೆ ಮತ್ತು ಬಿದ್ದುಹೋದ ಜನಾಂಗಕ್ಕಾಗಿ (ಇಬ್ರಿಯರಿಗೆ 7:25) ಮಧ್ಯಸ್ಥಿಕೆ ವಹಿಸುತ್ತಿದ್ದಾರೆ. ಸಾಮರಸ್ಯದಿಂದ, ಸಿಂಹಾಸನ ಕೋಣೆಯ ನಿವಾಸಿಗಳಿಗೆ ಮಹಾಶಬ್ದವು ಕೇಳಿಸಿತು : "ವದಿತನಾದ ಕುರಿಯಾದಾತನು ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯ ಮಾನ ಪ್ರಭಾವ ಸ್ತೋತ್ರಗಳನ್ನು ಹೊಂದುವುದಕ್ಕೆ ಯೋಗ್ಯನು ಎಂದು ಹೇಳಿದರು (ಪ್ರಕಟನೆ 5:12).

ಈ ಹಂತದಲ್ಲಿ ಪರಲೋಕ ಮತ್ತು ಭೂಮಿಯಲ್ಲಿರುವ ಎಲ್ಲಾ ಸೃಷ್ಟಿಗಳು ತಂದೆ ಮತ್ತು ಕ್ರಿಸ್ತನಿಗೆ ರಾಜವೈಭವದ ಆರಾಧನೆಯನ್ನು ಒಟ್ಟಾಗಿ ನೀಡುವಲ್ಲಿ ಸೇರಿಕೊಳ್ಳುತ್ತವೆ : "ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ ಸ್ತೋತ್ರಮಾನ ಪ್ರಭಾವ ಆಧಿಪತ್ಯಗಳು ಯುಗಯುಗಾಂತರಗಳಲ್ಲಿಯೂ ಇರಲಿ" (ಪ್ರಕಟನೆ 5:12). ಅವರ ಸ್ತೋತ್ರಕ್ಕೆ ನಾಲ್ಕು ಜೀವಿಗಳಿಂದ ಮತ್ತು 24 ಹಿರಿಯರು ಅಡ್ಡಬಿದ್ದು ನಮಸ್ಕರಿಸಿದವರೊಂದಿಗೆ "ಆಮೆನ್" ಅಂದವು. ಹೀಗೆ ಪರಲೋಕ ಸಿಂಹಾಸನ ಕೊಠಡಿಯಲ್ಲಿ ಈ ಭವ್ಯವಾದ ಪರವಶತೆಯಿಂದ ಕೂಡಿದ ಆರಾಧನೆ

ಕೊನೆಗೊಳ್ಳುತ್ತದೆ.

ಒಂದು ದಿನ ಸಾರ್ವತ್ರಿಕವಾಗಿ ಈ ವಿಶ್ವವು ಸುಟ್ಟುಹೋಗುತ್ತದೆ, ಮತ್ತು ಅದೇ ಕುಸಿಯುತ್ತದೆ ಅಥವಾ ಒಡೆದು ಹೋಗುತ್ತದೆ ಎಂದು ಭೌತ ವಿಜ್ಞಾನಿಗಳು ಊಹಿಸಿದ್ದಾರೆ. ದೇವರ ವಾಕ್ಯದಲ್ಲಿ ಭವಿಷ್ಯದ ಕುರಿತು ಯಾವ ವ್ಯತ್ಯಾಸ ತೋರಿಸುತ್ತದೆ! ಈಗ ನಾವು ಎದುರು ನೋಡುತ್ತಿರುವ ಭವಿಷ್ಯದಲ್ಲಿ ನಾವು ಸಂತೋಷಿಸಲು ಪ್ರಾರಂಭಿಸುವುದು ಹೇಗೆ?

**ಗುರುವಾರ** **ಜನವರಿ 24**

## ಪಂಚಾಶತ್ತಮದ ಮಹತ್ವ

ಪಂಚಾಶತ್ತಮದಲ್ಲಿ ಪರಿಶುದ್ಧಾತ್ಮನ ಮಳೆಯಲ್ಲಿ )ಅಪೋಸ್ತಲರ ಕೃತ್ಯಗಳು 2:1–4). ರಕ್ಷಣೆ ಯೋಜನೆಯ ಇತಿಹಾಸದಲ್ಲಿ ಅತ್ಯಂತ ನಿರ್ಣಾಯಕ ಘಟನೆಗಳಲ್ಲಿ ಒಂದನ್ನು ದೃಢಪಡಿಸುತ್ತದೆ : ಪರಲೋಕ ದೇವದರ್ಶನ ಗುಡಾರದಲ್ಲಿ ಮಹಾಯಾಜಕ ಮತ್ತು ಅರಸನಾಗಿ ಸೇವೆ ಸಲ್ಲಿಸುವ ಮುಂಚಿತವಾಗಿ ಕ್ರಿಸ್ತನು ಕಲ್ವಾರಿ ಸೇವೆಯನ್ನು ಉದ್ಘಾಟಿಸಿದ್ದನು (ಅಪೋಸ್ತಲರ ಕೃತ್ಯಗಳು 1:4–8; ಅಪೋಸ್ತಲರ ಕೃತ್ಯಗಳು 2:3 ಸಹ ನೋಡಿ). ತಂದೆಯ ಬಲಗಡೆಯಲ್ಲಿ ಮಹಾ ಯಾಜಕ ಸೇವೆಯ ಮೂಲಕ (ಪ್ರಕಟನೆ 5:6,7) ತನ್ನ ಅಂತಿಮ ಗ್ರಹಿಸುವಿಕೆ ಪರಲೋಕ ದೇವದರ್ಶನ ಗುಡಾರದಲ್ಲಿ ನಮ್ಮ ಮಧ್ಯಸ್ಥಿಕನಾಗಿ ಯೇಸು ನಮ್ಮನ್ನು ರಕ್ಷಿಸುವ ಕೆಲಸದಲ್ಲಿದ್ದಾರೆ. ಆತನ ಮೂಲಕ, ದೇವರ ಬಳಿಗೆ ಸದಸ್ಯರು ಉಚಿತ ಪ್ರವೇಶ ಅಧಿಕಾರ ಮತ್ತು ಅವರ ಪಾಪಗಳಿಗೆ ಕ್ಷಮಾಪಣೆಯನ್ನು ಪಡೆದುಕೊಳ್ಳಬಹುದು.

ಅಪೋಸ್ತಲರ ಕೃತ್ಯಗಳು 2:32–36 ಅದರ ಜೊತೆಗೆ ಯೋಹಾನ 7:39 ಓದಿ. ಪರಲೋಕದಲ್ಲಿ ಯೇಸು ನಮ್ಮ ಯಾಜಕ ಮತ್ತು ಅರಸನಾಗಿ ನಿಂತಿರುವ ಅಂಶದಿಂದ ನೀವು ಯಾವ ಭರವಸೆ ಮತ್ತು ಸಮಾಧಾನ ಕಂಡುಕೊಳ್ಳುವಿರಿ?

ಪರಲೋಕ ದೇವದರ್ಶನ ಗುಡಾರದಲ್ಲಿ ಕ್ರಿಸ್ತನ ಉತ್ಕರ್ಷದ ನಂತರ ಶಿಷ್ಯರು ಪವಿತ್ರಾತ್ಮನನ್ನು ಅನುಸರಿಸಿದ ಸಂತತಿಯಾದರು ಪ್ರಕಟನೆ 5:6 ರಲ್ಲಿ "ಭೂಮಿಯ

ಮೇಲೆಲ್ಲಾ ಕಳುಹಿಸಲ್ಪಟ್ಟಿರುವ" ಏಳು ಆತ್ಮಗಳನ್ನು ಉಲ್ಲೇಖಿಸುತ್ತದೆ. ನಾವು ಮೊದಲಿನ ಪಾಠದಲ್ಲಿ ನೋಡಿದಂತೆ, ಏಳು ಆತ್ಮಗಳು ಲೋಕದಲ್ಲಿ ಪವಿತ್ರಾತ್ಮನ ಚಟುವಟಿಕೆಯ ಸಂಪೂರ್ಣತೆಯನ್ನು ಸೂಚಿಸುತ್ತದೆ. ಕ್ರಿಸ್ತನ ಸಿಂಹಾಸನ ಕಡೆಯಿಂದ ಆತ್ಮವನ್ನು ಸಭೆಗೆ ಕಳುಹಿಸಲಾಗಿದೆ. ಪರಲೋಕ ದೇವದರ್ಶನ ಗುಡಾರದಲ್ಲಿ ನಮ್ಮ ಮಹಾಯಾಜಕನಾಗಿರುವ ಕ್ರಿಸ್ತನ ಮೊದಲ ಕಾರ್ಯಪವಿತ್ರಾತ್ಮನನ್ನು ಕಳುಹಿಸುವುದು. ಪವಿತ್ರ ಆತ್ಮನ ಮಳೆ ಸುರಿಸುವಿಕೆಯಿಂದ, ಯೇಸು ತಂದೆಯ ಮುಂದೆ ಕಾಣಿಸಿಕೊಂಡಿದ್ದು ಮತ್ತು ಮನುಷ್ಯಕುಲದ ಪರವಾಗಿ ದೇವರು ಆತನ ತ್ಯಾಗವನ್ನು ಸ್ವೀಕರಿಸಿದ್ದಾನೆಂದು ಅರ್ಥಕೊಡುತ್ತದೆ.

"ಪರಲೋಕಕ್ಕೆ ಕ್ರಿಸ್ತನ ಆರೋಹಣವು ಅವನ ಅನುಯಾಯಿಗಳ ವಾಗ್ದಾನ ಆಶೀರ್ವಾದವನ್ನು ಪಡೆಯಬೇಕೆಂಬ ಸಂಕೇತವಾಗಿತ್ತು... ಕ್ರಿಸ್ತನು ಪರಲೋಕ ದ್ವಾರಗಳಲ್ಲಿ ಈ ಸಮಾರಂಭವು ಮುಗಿದ ಕೂಡಲೇ, ಪವಿತ್ರಾತ್ಮವು ಸಮೃದ್ಧ ಪ್ರವಾಹದಂತೆ ಶಿಷ್ಯರ ಮೇಲೆ ಇಳಿದು ಬಂದಿತ್ತು ಮತ್ತು ನಿಜವಾಗಿಯೂ ಕ್ರಿಸ್ತನು ಮಹಿಮೆಯೊಂದಿದನು, ತಾನು ನಿತ್ಯತ್ವದಿಂದ ತಂದೆಯೊಡನೆ ಹೊಂದಿದ್ದ ಮಹಿಮೆಯೊಂದಿಗೂ ಸಹ ಪಂಚಾಶತ್ತಮದ ಮಳೆ ಸುರಿಸುವಿಕೆಯು ಪರಲೋಕದ ಸಂಪರ್ಕವಾಗಿದ್ದು ವಿಮೋಚಕನ ಉದ್ಘಾಟನೆಯನ್ನು ಸಾಧಿಸಲಾಯಿತು. ಆತನ ವಾಗ್ದಾನದಂತೆ, ಅವರು ಪವಿತ್ರಾತ್ಮವನ್ನು ಪರಲೋಕದಿಂದ ತನ್ನ ಅನುಯಾಯಿಗಳಿಗೆ ಕಳುಹಿಸಿದರು. ಯಾಜಕ ಮತ್ತು ಅರಸನಾಗಿ, ತನ್ನಲ್ಲಿದ್ದ ಪವಿತ್ರಾತ್ಮನನ್ನು ಪರಲೋಕದಿಂದ ಅವರ ಹಿಂಬಾಲಕರಿಗೆ ಒಂದು ಗುರುತಾಗಿ ಕಳುಹಿಸಿದರು. ಭೂಲೋಕದ ಮೇಲೆ ಮತ್ತು ಪರಲೋಕದಲ್ಲಿ ಎಲ್ಲಾ ಅಧಿಕಾರವನ್ನು ಪಡೆದುಕೊಂಡರು ಮತ್ತು ಆತನ ಜನರಿಗೆ ಅಭಿಷಿಕ್ತನಾಗಿದ್ದನು" – ಎಲೆನ್ ಜಿ ವೈಟ್, ದ ಆಕ್ಟ್ಸ್ ಆಫ್ ಅಪೋಸ್ತಲ್ಸ್, ಪುಟಗಳು 38, 39.

ಇಬ್ರಿಯರಿಗೆ 4:16 ಮತ್ತು ಇಬ್ರಿಯರಿಗೆ 8:1 ಓದಿ. ಯೇಸು ನಮ್ಮ ಯಾಜಕ ಮತ್ತು ಅರಸನಾಗಿದ್ದಾನೆಂದು ಪರಲೋಕದಲ್ಲಿ ಮತ್ತು ಭೂಮಿಯ ಮೇಲೆ ಎಲ್ಲ ಅಧಿಕಾರವನ್ನು ಪಡೆದುಕೊಂಡಿದ್ದಾನೆಂಬ ಭರವಸೆಯಲ್ಲಿ ನೀವು ಯಾವ ಭರವಸೆ ಮತ್ತು ಪ್ರೋತ್ಸಾಹವನ್ನು ಪಡೆಯುತ್ತೀರಿ? ಈ ಸತ್ಯವನ್ನು ನಂಬುವುದರಿಂದ

ನಿಮ್ಮ ಜೀವನದಲ್ಲಿ ಮತ್ತು ಭವಿಷ್ಯದ ಅನಿಶ್ಚಿತತೆಯೊಂದಿಗೆ ಪ್ರತಿದಿನ ವ್ಯವಹರಿಸಲು ನಿಮಗೆ ಸಹಾಯ ಮಾಡುವುದು ಹೇಗೆ?

**ಶುಕ್ರವಾರ** **ಜನವರಿ 25**

**ಮುಂದಿನ ಆಲೋಚನೆ :** ಎಲೆನ್ ಜಿ ವೈಟ್, "ಟೂ ಮೈ ಫಾದರ್, ಆಂಡ್ ಯುವರ್ ಫಾದರ್", ಪುಟಗಳು 829–835, ಇನ್ ದ ಡಿಸೈರ್ ಆಫ್ ಏಜಸ್, 'ದ ಗಿಫ್ಟ್ ಆಫ್ ದ ಸ್ಪಿರಿಟ್' ಪುಟಗಳು 47–56, ಇನ್ ದ ಆಕ್ಟ್ಸ್ ಆಫ್ ಅಪೋಸ್ತಲ್ಸ್.

ಭೂಮಿಯ ಇತಿಹಾಸದ ಅಂತ್ಯದಲ್ಲಿ ವಾಸಿಸುವ ದೇವರ ಜನರಿಗೆ ಪ್ರಕಟನೆ 4 ಮತ್ತು 5 ರ ಸಂದೇಶ ಬಹಳ ಮುಖ್ಯವಾಗಿದೆ. ಪಂಚಾಶತ್ತಮದಲ್ಲಿ ಪರಿಶುದ್ಧ ಆತ್ಮನ ಬರುವಿಕೆಯು ಪ್ರಪಂಚದಾದ್ಯಂತ ಸುವಾರ್ತೆಯ ಬೋಧನೆಯ ಆರಂಭವನ್ನು ಗುರುತಿಸಿತು; ಯೇಸುವೇ ಪ್ರಧಾನ ಸಂದೇಶವಾಗಿದ್ದಾರೆ, ತಂದೆಯ ಬಲಗಡೆಯಲ್ಲಿ ಯಾಜಕ ಮತ್ತು ಅರಸನಾಗಿ ಉನ್ನತಿಗೇರಿದ್ದಾರೆ. ಯೇಸುವಿನ ಬಗೆಗಿನ ಈ ಸತ್ಯವು ಆರಂಭಿಕ ಕ್ರೈಸ್ತರ ಹೃದಯ ನಂಬಿಕೆಯಾಗಿತ್ತು (ಇಬ್ರಿಯರಿಗೆ 8:1) ಮತ್ತು ಅವರ ಪ್ರಸಂಗದ ಮೂಲೆಗಲ್ಲಾಗಿತ್ತು (ಅಪೋಸ್ತಲರ ಕೃತ್ಯಗಳು 2:32–33; ಅಪೋಸ್ತಲರ ಕೃತ್ಯಗಳು 5:30,31). ಅದು ಅವರ ಪ್ರೇರಣೆ ಮತ್ತು ಅವರ ನಂಬಿಕೆಯ ಮೂಲ ಮತ್ತು ಕಷ್ಟ ಜೀವನ ಪರಿಸ್ಥಿತಿಗಳು ಮತ್ತು ಹಿಂಸೆಯಲ್ಲಿಯೂ ಸಹ ಧೈರ್ಯವಾಗಿರುವುದು (ಅಪೋಸ್ತಲರ ಕೃತ್ಯಗಳು 7:55,56; ರೋಮಾಪುರದವರಿಗೆ 8:34). ಪರಿಣಾಮವಾಗಿ, ಅನೇಕ ಜನರು ಅವರ ಉಪದೇಶಕ್ಕೆ ಪ್ರತಿಕ್ರಿಯಿಸಿದರು. ಆ ಸಮಯದಿಂದಲೇ, ದೇವರ ರಾಜ್ಯ ಅದಕ್ಕದೇ ರುಜುವಾತುಪಡಿಸಿತು, ಮತ್ತು ಪರಿಶುದ್ಧ ಆತ್ಮನ ಸೇವೆಯ ಮೂಲಕ ಹೀಗೆ ಮಾಡುತ್ತಾ ಇರುತ್ತದೆ.

ಮನುಷ್ಯರ ಹೃದಯವನ್ನು ಮಾರ್ಪಡಿಸಲು ಮತ್ತು ತಲುಪಲು ಕ್ರಿಸ್ತನಲ್ಲಿರುವ ರಕ್ಷಣೆಯ ಶುಭ ಸಮಾಚಾರವನ್ನು ನಾವು ಎಂದಿಗೂ ಮರೆಯಲೇಬಾರದು (ಪ್ರಕಟನೆ 14:7). ಪರಲೋಕ ದೇವದರ್ಶನ ಗುಡಾರದಲ್ಲಿ ನಮ್ಮಯಾಜಕ ಮತ್ತು ಅರಸನಾಗಿರುವ ನಮ್ಮ ರಕ್ಷಕನಲ್ಲೇ ಮಾತ್ರ ನಮ್ಮ ಭರವಸೆಯಿರಬೇಕು.

ಅವನು ಆತನ ಜನರೊಂದಿಗಿದ್ದಾನೆ ಮತ್ತು ಕೊನೆಯವರೆಗೂ ಆತನು ಅವರ ಜೊತೆಯಲ್ಲೇ ಇರುತ್ತಾನೆ (ಮತ್ತಾಯ 28:20). ಅವನು ತನ್ನ ಕೈಯಲ್ಲಿ ಭವಿಷ್ಯವನ್ನು ಹಿಡಿದಿದ್ದಾನೆ. ಆದ್ದರಿಂದ, ಸುವಾರ್ತೆಯ ಪ್ರಾಮುಖ್ಯತೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದರಿಂದ ನಾವು ಮಾನವ ಕುಲದ ಕಳೆದುಹೋದ ಮತ್ತು ದುಃಖಕ್ಕೆ ಅಂತಿಮ ಸಂದೇಶವನ್ನು ಉಪದೇಶಿಸುವುದರಲ್ಲಿ ಸಂಪೂರ್ಣ ಯಶಸ್ಸನ್ನು ತರುತ್ತೇವೆ ಎಂದು ನಾವು ಮರೆಯಬಾರದು.

## ಚರ್ಚಿಸಬೇಕಾದ ಪ್ರಶ್ನೆಗಳು

1. ಒಂದು ದಿನ ನಾವು ಪರಲೋಕದಲ್ಲಿ ಆತನ ಒಳ್ಳೇಯತನಕ್ಕಾಗಿ ಮತ್ತು ವಿಶೇಷವಾಗಿ ಅವನ ಕೃಪೆ ಮತ್ತು ಬಲದಿಂದ ಕರ್ತನನ್ನು ಆರಾಧಿಸುತ್ತೇವೆ. ಆ ಮಹಾದಿನ ಬರುವ ಸಮಯಕ್ಕೆ ನಾವು ಈಗಲೂ ಅಭ್ಯಾಸದಲ್ಲಿ ಪಡೆಯುವ ಮಾರ್ಗಗಳು ಯಾವುವು? ಅಂದರೆ, ನಾವು ಕೃತಜ್ಞತೆಯುಳ್ಳ ಹೃದಯದೊಂದಿಗೆ ಆರಾಧಿಸುತ್ತೇವೆ ಮತ್ತು ಆತನು ಮಾಡಿದ ಉಪಕಾರಕ್ಕೆ ಮತ್ತು ಮಾಡುವುದಕ್ಕೂ ಈಗ ದೇವರಿಗೆ ಹೇಗೆ ಸ್ತೋತ್ರ ಸಲ್ಲಿಸುವುದು?

2. ಪ್ರಕಟನೆ 4:11 ಮತ್ತು ಪ್ರಕಟನೆ 5:9 ಓದಿ ಯಾವ ಪಾತ್ರದಲ್ಲಿ ನಾವು ಇಲ್ಲಿ ತಂದೆ ಮತ್ತು ಮಗನನ್ನು ನೋಡುತ್ತೇವೆ ಮತ್ತು ರಕ್ಷಣೆಯ ಯೋಜನೆಗೆ ಮಾತ್ರವಲ್ಲ. ಆದರೆ ದೇವರು ಏಕೆ ಆರಾಧನೆಗೆ ಯೋಗ್ಯನಾಗಿದ್ದಾನೆಂದು ನಮಗೆ ಈ ಎರಡೂ ಕೇಂದ್ರ ಪಾತ್ರಗಳು ಹೇಗೆ ತಿಳಿಸುತ್ತಿವೆ? ನಮ್ಮ ದೇವರ ಬಗ್ಗೆ ಈ ಎರಡು ಅದ್ಭುತ ಸತ್ಯಗಳ ಪ್ರಯೋಗದಿಂದ ಸಬ್ಬತ್ತು ಹೇಗಿದೆ ಮತ್ತು ಅದು ಏನನ್ನು ಕಲಿಸುತ್ತದೆ?